

# ಖಣ ಉಡುಪಿಗೂ ಆಕ್ಸೆಸರೀಸ್‌ಗೂ

**ಖಣದ ಸೀರೆ, ಡ್ರೆಸ್, ಆಕ್ಸೆಸರೀಸ್ ಫ್ಯಾಷನ್ ಟ್ರೆಂಡ್ ಸೃಷ್ಟಿಸಿವೆ. ನಿತ್ಯ ಬಳಕೆಗೂ ಸೈ, ವಿಶೇಷ ಸಂದರ್ಭಗಳಿಗೂ ಸೈ ಎನಿಸುವ ಖಣದ ಉಡುಪು, ಒಡವೆ ಮಹಿಳೆಯರೆಲ್ಲರ ಮೆಚ್ಚುಗೆ ಗಳಿಸಿದೆ.**

■ ಆಶಾ ಎಸ್. ಕುಲಕರ್ಣಿ

ಖಣದ ಸೀರೆ ಎವರ್‌ಗ್ರೀನ್ ಫ್ಯಾಷನ್ ಎನಿಸಿದೆ. ಸೀರೆಯ ವಿನ್ಯಾಸ, ಬಣ್ಣ, ಗುಣಮಟ್ಟದಿಂದಾಗಿ ಖಣದ ಸೀರೆ ಜನಪ್ರಿಯತೆಯ ಹಾದಿಯಲ್ಲಿದೆ. ಇದೀಗ ಖಣದ ಸೀರೆಯ ಜೊತೆಗೆ ಇದರದ್ದೇ ಡ್ರೆಸ್, ಆ್ಯಕ್ಸೆಸರೀಸ್ ಕೂಡ ಬಂದಿದ್ದು, ಫ್ಯಾಷನ್‌ಪ್ರಿಯರಿಗೆ ಸಂತಸ ತಂದಿದೆ.

ಸೀರೆಯ ಜೊತೆಗೆ ಖಣದ್ದೇ ಕಿವಿಯೋಲೆ, ಸರ, ಪೌಚ್‌ಗಳು, ಬ್ಯಾಗ್‌ಗಳೂ ಬಂದಿದ್ದು, ಸಿಮಿಲರ್, ಕಾಂಟ್ರಾಸ್ಟ್, ಮಿಕ್ಸ್ ಅಂಡ್ ಮ್ಯಾಚ್... ಹೀಗೆ ಎಲ್ಲ ವೈವಿಧ್ಯದ ಫ್ಯಾಷನ್‌ಗೂ ಅನುಕೂಲವಾಗಿದೆ.

ಬಾಗಲಕೋಟೆ ಜಿಲ್ಲೆಯ ಗುಳೇದಗುಡ್ಡ ತಾಲ್ಲೂಕು ಖಣದ ಬಟ್ಟೆಗಳಿಂದಾಗಿ ಹೆಸರುವಾಸಿ, ಇತ್ತೀಚೆಗೆ ಈ ಬಟ್ಟೆಗಳಿಗೆ ಹೆಚ್ಚಿನ ಬೇಡಿಕೆಯೂ ಇದೆ. ಮಕ್ಕಳಿಗಾಗಿ ಲೆಹೆಂಗಾಚೋಲಿ, ಫ್ರಾಕ್, ಮಹಿಳೆಯರಿಗಾಗಿ ಚೂಡಿದಾರ್ ಟಾಪ್‌ಗಳು, ಕುರ್ತಿಗಳು, ಜೀನ್ಸ್ ಮೇಲೆ ಧರಿಸುವ ಲಾಂಗ್ ಟಾಪ್, ಶಾರ್ಟ್ ಟಾಪ್... ಹೀಗೆ ನಾನಾ ರೀತಿಯಾಗಿ ಈ ಖಣದ ಬಟ್ಟೆಗಳನ್ನು ಉಪಯೋಗಿಸಲಾಗುತ್ತಿದೆ. ಇದನ್ನು ಸಾಂಪ್ರದಾಯಿಕವಾಗಿ ಇಳಕಲ್ ಸೀರೆಯೊಂದಿಗೆ ಕುಪ್ಪಸಗಳಾಗಿ ಧರಿಸಲಾಗುತ್ತದೆ.

ಈ ಬಟ್ಟೆಗಳಲ್ಲಿ ಸಾಕಷ್ಟು ವಿನ್ಯಾಸಗಳಿದ್ದು ಅವುಗಳಲ್ಲಿ ಪ್ರಮುಖವಾಗಿ ಹೂವು, ಎಲೆಗಳ ವಿನ್ಯಾಸ, ಡೈಮಂಡ್ ಆಕಾರ, ಚೌಕೋನ, ತ್ರಿಕೋನ, ದುಂಡಗೆ... ಹೀಗೆ ನಾನಾ ಬಗೆಯ ವಿನ್ಯಾಸಗಳು ಗಮನಸೆಳೆಯುವಂತಿವೆ. ಈ ಖಣದ ಬಟ್ಟೆಗಳನ್ನು ಸಾಕಷ್ಟು ಬಣ್ಣ ಬಣ್ಣಗಳಲ್ಲಿ ನೇಯ್ಗೆ ಮಾಡಲಾಗುತ್ತದೆ. ಅವುಗಳಲ್ಲಿ ಪ್ರಮುಖವಾಗಿ ಗ್ರೇ ಬಣ್ಣ ಹಾಗೂ ಗಾಢ ನೀಲಿ ಬಣ್ಣಗಳು ಇದೀಗ ಟ್ರೆಂಡಿಂಗ್‌ನಲ್ಲಿವೆ. ಇನ್ನೊಂದು ವಿಶೇಷವೆಂದರೆ ಈ ಬಟ್ಟೆಯ ಕೆಳಭಾಗದಲ್ಲಿರುವ ಬಾರ್ಡರ್. ಸಿಲ್ವರ್ ದಾರಗಳಿಂದ ನೇಯಲ್ಪಟ್ಟ ಎರಡೆಳೆ ಹಾಗೂ ಒಂದೆಳೆಯ ಬಾರ್ಡರ್‌ಗಳು ಈ ಬಟ್ಟೆಗೆ ವಿಶೇಷ ಲುಕ್ ನೀಡುತ್ತವೆ. ಸಿಲ್ವರ್ ಬಾರ್ಡರ್‌ನಲ್ಲಿಯೂ ಕೂಡ ವೈವಿಧ್ಯಮಯ ವಿನ್ಯಾಸಗಳಿವೆ. ಈ ಫ್ಯಾಬ್ರಿಕ್ ಮೂಲತಃ ಹತ್ತಿ ಮತ್ತು ಆರ್ಟ್ ಸಿಲ್ಕ್‌ನ ಮಿಶ್ರಣವಾಗಿದೆ.

ಇತ್ತೀಚಿನ ದಿನಗಳಲ್ಲಿ ಈ ಫ್ಯಾಬ್ರಿಕ್ ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಹೆಸರುವಾಸಿಯಾಗಿದ್ದು ಸಾಕಷ್ಟು ವಸ್ತ್ರವಿನ್ಯಾಸಕಾರರು ಈ ಬಟ್ಟೆಯಿಂದ ತರಹೇವಾರಿ ಉಡುಪುಗಳನ್ನು ತಯಾರಿಸಿ ಎಲ್ಲರ ಹುಬ್ಬೇರುವಂತೆ ಮಾಡಿದ್ದಾರೆ. ಇದರಿಂದ ತಯಾರಿಸಿದ ಉಡುಪುಗಳು ಪಾರ್ಟಿಗಳಿಗೂ ಸೈ ಹಾಗೇ ಶುಭ ಸಮಾರಂಭಕ್ಕೂ ಸೈ ಎನ್ನುವಂತೆ ಎಲ್ಲರನ್ನೂ ಆಕರ್ಷಿಸುತ್ತಿವೆ.

### ಒಡವೆ, ಆಕ್ಸೆಸರಿಗಳಿಗೂ ಸೈ!

ಈ ತರಹದ ಖಣದ ಬಟ್ಟೆಗಳು ಇದೀಗ ಬರೀ ಉಡುಪುಗಳನ್ನು ತಯಾರಿಸಲು ಮಾತ್ರವಲ್ಲ; ಒಡವೆ ತಯಾರಿಸುವುದಕ್ಕೂ ಉಪಯೋಗಿಸಲಾಗುತ್ತಿದೆ. ಫ್ಯಾಷನ್ ಲೋಕ ಬದಲಾದಂತೆ

